ರೀತಿಯಲ್ಲಿ ಕೆಲಸವು ಆಗುವ ರೀತಿಯಲ್ಲಿ ಸಮಗ್ರವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆಂದು ತಮ್ಮ ಮೂಲಕ ತಿಳಿಯಬಯಸುತ್ತೇನೆ.

ಡಾ: ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿಜಯಶಂಕರ್‌ರವರೇನು ಹೇಳಿದ್ದಾರೆ ಅದೇ ರೀತಿ ನನ್ನ ಕ್ಷೇತ್ರದಲ್ಲೂ ಆಗಿದೆ. ಸಣ್ಣ ನೀರಾವರಿಯ ಹೆಚ್ಚಿನ ಕೆಲಸವು ಆಗುತ್ತಿರುವುದು ನನ್ನ ಮಾಗಡಿ ಕ್ಷೇತ್ರದಲ್ಲಿ. ಆದರೆ ತಾವು ನಮ್ಮಲ್ಲಿರುವ ಸಣ್ಣ ನೀರಾವರಿ ಕಛೇರಿಯನ್ನು ನೆಲಮಂಗಲಕ್ಕೆ ವರ್ಗ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೀರಿ. ನೆಲಮಂಗಲದಲ್ಲಿ ಬಹುಶ: ಸಣ್ಣನೀರಾವರಿ ಕೆಲಸಗಳು ಬಹಳ ಕಡಿಮೆ ಇದೆ. ಆದ್ದರಿಂದ ದಯಮಾಡಿ ಆ ಕಛೇರಿಯನ್ನು ನನ್ನ ಕ್ಷೇತ್ರವಾದ ಮಾಗಡಿಯಲ್ಲಿಯೇ ಮುಂದುವರೆಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ವಿಷಯ:- ಬೆಂಗಳೂರು ನಗರದಲ್ಲಿ ಖಾಸಗಿ ಬಸ್ಸುಗಳ ನಿಲ್ದಾಣದ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 516

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿ ನಗರ):- 23-7-96 ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನಗರಕ್ಕೆ ಬರುವ ಹಾಗೂ ಇಲ್ಲಿಂದ ಹೋಗುವ ಖಾಸಗಿ ಬಸ್ಸುಗಳ ನಿಲ್ದಾಣವನ್ನು ಮಿನರ್ವ ಮಿಲ್ ಮೈದಾನದಲ್ಲಿ ನಿರ್ಮಾಣ ಮಾಡುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಅನಂತನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು):-

ಅ) ಹೌದು.

ಆ) ಮಿನರ್ವಮಿಲ್ ಮೈದಾನದಲ್ಲಿ ಖಾಸಗಿ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡಲು ತೀರ್ಮಾನಿಸಿದ್ದು, ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿಗಳನ್ನು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೋರಲಾಗಿತ್ತು. ಆದರೆ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕ್ರಮವನ್ನು ಪ್ರಶ್ನಿಸಿ ನ್ಯಾಯಾಲಯದಿಂದ ಮಿಲ್‌ನ ಅಧಿಕಾರಿಗಳು ತಡೆಯಾಜ್ಞೆ ತಂದಿರುತ್ತಾರೆ. ಆದುದರಿಂದ ಈ ಪ್ರಸ್ತಾವವನ್ನು ಕೈಬಿಡಲಾಯಿತು. ಬಿನ್ನಿ ಮಿಲ್ ಕೆರೆ ಏರಿಯ ಮುಂಭಾಗದಲ್ಲಿರುವ ಜಮೀನನ್ನು ಕಾಂಟ್ರಾಕ್ಟ್ ಕ್ಯಾರೇಜ್‌ಗಳಿಗೆ ಉಪಯೋಗಿಸಿಕೊಳ್ಳಲು ತೀರ್ಮಾನಿಸಲಾಗಿದೆ.

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರಕ್ಕೆ ಬರುವ ಖಾಸಗಿ ಬಸ್ಸುಗಳಿಗೆ ಮಿನರ್ವಮಿಲ್‌ನ ಹತ್ತಿರ ನಿಲ್ದಾಣವನ್ನು ಮಾಡುವುದಾಗಿ ಹಿಂದೆ

ಇದೇ ಸದನದಲ್ಲಿ ಭರವಸೆಯನ್ನು ಕೊಟ್ಟಿದ್ದರು. ಅದರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ಎಂದು ಕೇಳಿದ್ದಕ್ಕೆ ಮಿನರ್ವ ಮಿಲ್‌ನವರು ಕೋರ್ಟ್‌ನಿಂದ ತಡೆಯಾಜ್ಞೆಯನ್ನು ತಂದಿದ್ದಾರೆ, ಆದ್ದರಿಂದ ಈ ಪ್ರಸ್ತಾವವನ್ನು ಕೈಬಿಡಲಾಯಿತು, ಬಿನ್ನಿ ಮಿಲ್ ಕೆರೆ ಏರಿ ಮುಂಭಾಗದಲ್ಲಿರುವ ಜಮೀನನ್ನು ಕಾಂಟ್ರಾಕ್ಟ್ ಕ್ಯಾರೇಜ್‌ಗಳಿಗೆ ಉಪಯೋಗಿಸಲು ತೀರ್ಮಾನ ಮಾಡಲಾಗಿದೆಯೆಂದು ಉತ್ತರ ಹೇಳಿದ್ದಾರೆ. ನನ್ನ ಉಪಪ್ರಶ್ನೆಗಳೇನೆಂದರೆ, ಪ್ರತಿ ದಿವಸ ಬೆಂಗಳೂರು, ನಗರಕ್ಕೆ ಬರುವ ಖಾಸಗಿ ಬಸ್ಸುಗಳ ಸಂಖ್ಯೆ ಎಷ್ಟು? ಮಿನರ್ವ ಮಿಲ್‌ನವರು ಯಾವಾಗ ತಡೆಯಾಜ್ಞೆ ತಂದರು? ಆ ಮೈದಾನವೇನಿದೆ ಅದು ಮಿನರ್ವ ಮಿಲ್ಲಿಗೆ ಸೇರಿದ ಜಾಗವಲ್ಲ. ಆದರೂ ತಡೆಯಾಜ್ಞೆಯನ್ನು ತಂದಿದ್ದಾರೆಂದು ಉತ್ತರ ಕೊಟ್ಟಿದ್ದಾರೆ. ತಡೆಯಾಜ್ಞೆ ಬಂದತಕ್ಷಣ ಪ್ರಸ್ತಾಪವನ್ನು ಕೈಬಿಡಲು ಕಾರಣವೇನು? ಆ ತಡೆಯಾಜ್ಞೆಯನ್ನು ತೆರವು ಮಾಡಿಸದೆಯೇ ಪ್ರಸ್ತಾವವನ್ನೇಕೆ ಕೈಬಿಟ್ಟಿದ್ದೀರಿ? ಬಿನ್ನಿಮಿಲ್ ಕೆರೆಯ ಏರಿಯಾದಲ್ಲೇನು ಬಸ್ಸ್ ನಿಲ್ದಾಣವನ್ನು ಮಾಡುವುದಾಗಿ ಹೇಳಿದ್ದೀರಿ ಆ ಜಾಗ ಸೂಕ್ಷವಾಗಿದಿಯೇ? ನಿಲ್ದಾಣವನ್ನು ಮಾಡಲು ಈಗ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ?

ಶ್ರೀ ಅನಂತ್‌ನಾಗ್:- ಮಾನ್ಯ ಅಧ್ಯಕ್ಷರೆ, ಪ್ರತಿ ದಿನ ಬೆಂಗಳೂರು ನಗರಕ್ಕೆ ಎಷ್ಟು ಖಾಸಗಿ ಬಸ್ಸುಗಳು ಬರುತ್ತವೆ ಎಂಬ ಪ್ರಶ್ನೆಗೆ ತಕ್ಷಣ ನನ್ನ ಹತ್ತಿರ ಉತ್ತರವಿಲ್ಲ ಅದನ್ನು ಅನಂತರ ತರಿಸಿಕೊಡುತ್ತೇನೆ. ಆ ಜಾಗ ಮಿನರ್ವ ಮಿಲ್‌ನವರದ್ದು ಅಲ್ಲವೆಂದ ಮೇಲೆ ತಡೆಯಾಜ್ಞೆ ಹೇಗೆ ಬಂತು ಎಂಬ ಬಗ್ಗೆ ವಿಚಾರಣೆ ಮಾಡಬೇಕಾಗುತ್ತದೆ. ಆದರೂ ಅವರು ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿದ್ದಾರೆ. ಆದ್ದರಿಂದ ಭೂಸ್ವಾಧೀನಪಡಿಸುವ ಕೆಲಸವನ್ನು ಕೈಬಿಡಲಾಯಿತು. ಆದರೂ ಮುಂಭಾಗದಲ್ಲಿರುವ ಜಮೀನಿನಲ್ಲಿ ಕಾಂಟ್ರಾಕ್ಟ್ ಕ್ಯಾರೇಜ್ ನಿಲ್ದಾಣವನ್ನು ಟ್ರಕ್ ಟರ್ಮಿನಲ್‌ಗೋಸ್ಕರ ನಿರ್ಮಿಸಲು ಮಹಾನಗರ ಪಾಲಿಕೆಯಿಂದ ಪ್ರಯತ್ನ ಮಾಡಲಾಗಿದೆ. ಇದರ ಬಗ್ಗೆ ಟ್ರಕ್ ಮಾಲೀಕರ ಜೊತೆಯಲ್ಲಿ ಹಲವಾರು ಸುತ್ತಿನ ಮಾತುಕತೆ ನಡೆಸಲಾಗಿದೆ. ಖಾಸಗಿ ಟ್ರಕ್ ಮಾಲೀಕರು ಒಂದು ಸಂಸ್ಥೆಯನ್ನು ರಚಿಸಿ ಖಾಸಗಿ ಬಸ್ ನಿಲ್ದಾಣವನ್ನು ಅಭಿವೃದ್ಧಿಪಡಿಸುವಂತೆ ಸಲಹೆ ಮಾಡಿದರೆ ಅನುಕೂಲವಾಗುತ್ತದೆ. ಅವರುಗಳು ಒಂದು ವೇಳೆ ಆ ರೀತಿ ಬರದಿದ್ದಲ್ಲಿ ಮಹಾನಗರ ಪಾಲಿಕೆ ಮತ್ತು ಸರ್ಕಾರ ಒಟ್ಟುಗೂಡಿ ಟ್ರಕ್ ಟರ್ಮಿನಲ್ ಅಥವಾ ಕಾಂಟ್ರಾಕ್ಟ್ ಕ್ಯಾರೇಜ್ ನಿಲ್ದಾಣವನ್ನು ಮಾಡುವ ಬಗ್ಗೆ ಪರಿಶೀಲನೆ ಮಾಡುವುದಾಗಿ ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ಇಂದು ಖಾಸಗಿ ಬಸ್ ನಿಲ್ದಾಣವೇ ಇಲ್ಲ. ಆದ್ದರಿಂದ ಟ್ರಕ್ ಟರ್ಮಿನಲ್ ಮಾಡುತ್ತೀರೋ ಅಥವಾ ಖಾಸಗಿ ವಾಹನಗಳಿಗೆ ನಿಲ್ದಾಣವನ್ನು ಮಾಡುತ್ತೀರೋ? ಇದರ ಬಗ್ಗೆ ಸರ್ಕಾರದ ನಿರ್ಧಾರವೇನು?

ಶ್ರೀ ಅನಂತನಾಗ್:- ಖಾಸಗಿ ಬಸ್ ನಿಲ್ದಾಣವನ್ನು ಮಾಡಬೇಕೆಂದೇ ಸರ್ಕಾರದ

ತೀರ್ಮಾನ.

ಡಾ:ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಸುರೇಶ್‌ಕುಮಾರ್‌ರವರು ಎತ್ತಿದತಕ್ಕ ಪ್ರಶ್ನೆ ಬಹಳ ಒಳ್ಳೆಯ ಪ್ರಶ್ನೆ. ನಮ್ಮ ಕಲಾಸಿಪಾಳ್ಯದಲ್ಲಿರುವ ಖಾಸಗಿ ಬಸ್ ನಿಲ್ದಾಣವನ್ನು ನೋಡಲು ಆಗುವುದಿಲ್ಲ. ಬಿನ್ನಿಮಿಲ್ ಹತ್ತಿರ ಇದನ್ನು ಮಾಡಲು ಪ್ರಸ್ತಾವನೆಯಿದೆಯೆಂದು ಬಹಳ ವರ್ಷಗಳಿಂದ ಸರ್ಕಾರ ಹೇಳಿಕೊಂಡು ಬರುತ್ತಿದೆ. ಆದಷ್ಟು ಬೇಗ ಆ ವ್ಯವಸ್ಥೆಯಾಗಬೇಕು. ಕಲಾಸಿಪಾಳ್ಯನಲ್ಲಿರುವ ನಿಲ್ದಾಣವನ್ನು ಶುಚಿಯಾಗಿಡಬೇಕು. ಮತ್ತು ಖಾಸಗಿ ಬಸ್ಸುಗಳು ಹಾಗೂ ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ಬೇರೆ ಬೇರೆ ಕಡೆ ನಿಲ್ಲಲು ಅನುಕೂಲ ಮಾಡಿಕೊಡಬೇಕು. ರೈತರಿಗೆ ಬಹಳ ತೊಂದರೆಯಾಗಿದೆ. ಮಳೆಬಂದರೆ ಆ ರಸ್ತೆಯಲ್ಲಿ ಓಡಾಡಲು ಆಗುವುದಿಲ್ಲ. ಆ ಜಾಗ ಬಹಳ ಕೆಟ್ಟದಾಗಿದೆ. ಆದಷ್ಟು ಬೇಗ ಅದನ್ನು ಬೇರೆ ಕಡೆಗೆ ಸ್ಥಳಾಂತರಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಮಿನರ್ವ ಮಿಲ್ ಸ್ಥಳವೇನಿದೆ ಅದು ನನ್ನ ಮತಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದಂತೆ ಮಿನರ್ವಮಿಲ್‌ನವರ ಹತ್ತಿರವೇನು ಎನ್.ಟಿ.ಸಿ. ಇದೆ ಅವರ ಹತ್ತಿರ ಯಾವುದೇ ದಾಖಲೆ ಪತ್ರಗಳು ಇಲ್ಲ. ರೈಲ್ವೆ ಇಲಾಖೆಯವರು ಹೇಗೆ ಒಂದು ಮ್ಯಾಪನ್ನು ಬರೆದಿಟ್ಟುಕೊಂಡು ಬೆಂಗಳೂರಿನ ಅರ್ಧ ಭಾಗ ನಮಗೇ ಸೇರಬೇಕೆಂದು ಹೇಳುತ್ತಾರೋ, ಅದೇ ರೀತಿ ಮಿನರ್ವ ಮಿಲ್‌ನವರು ಮಾಡಿದ್ದಾರೆ, ಅವರು ಕೋರ್ಟ್‌ನಲ್ಲಿ ಕೇಸ್ ಹಾಕಿ ತಡೆಯಾಜ್ಞೆ ತೆಗೆದುಕೊಂಡಿದ್ದಾರೆಂದರೆ ತಾವು ಕಾನೂನು ಪರಿಣಿತರ ಜೊತೆ ಸಂಪರ್ಕ ಮಾಡಿ ಅವರ ಹತ್ತಿರವಿರುವ ದಾಖಲೆ ಪತ್ರಗಳನ್ನು ತರಿಸಿಕೊಳ್ಳಬೇಕು. ಅವರ ಹತ್ತಿರ ಖಂಡಿತವಾಗಿ ದಾಖಲೆಪತ್ರಗಳಿಲ್ಲವೆಂದು ನನಗೆ ಗೊತ್ತು. ಮಿನರ್ವ ಮಿಲ್‌ನ ಸ್ಥಳವನ್ನು ಖಾಸಗಿ ಬಸ್ ನಿಲ್ದಾಣ ಮಾಡಲು ಆಯ್ಕೆ ಮಾಡಿದ್ದು ತಪ್ಪಾದ ಆಯ್ಕೆ. ಕಾರಣ ರಾಜಾಜಿನಗರ, ಬಸವೇಶ್ವರನಗರ, ಮೆಜೆಸ್ಟಿಕ್, ವಿಧಾನಸೌಧದ ಕಡೆಗೆ ಬೆಳಗ್ಗೆ ಹೊತ್ತು ಬರಬೇಕಾದರೆ ಜನರು ನಮಗೆಲ್ಲ ಶಾಪ ಹಾಕುತ್ತಾರೆ. ಅಷ್ಟೊಂದು ತೊಂದರೆ ಪಟ್ಟು ಜನರು ಬರುತ್ತಾರೆ. ಅಷ್ಟು ಒತ್ತಡ ಅಲ್ಲಿದೆ. ಇಂಥ ಸ್ಥಿತಿಯಲ್ಲಿ ಮಿನರ್ವ ಮಿಲ್‌ನ ಸ್ಥಳದಲ್ಲಿ ಕಾಸಗಿ ಬಸ್ ನಿಲ್ದಾಣವನ್ನು ಮಾಡಿದರೆ ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಬೇಕಾದರೆ ಒಂದು ದಿವಸ ಬೇಕಾಗುತ್ತದೆ. ಅನಂತರ ಮುಖ್ಯಮಂತ್ರಿಯವರು ಬಿನ್ನಿ ಮಿಲ್ ಹತ್ತಿರ ಇದನ್ನು ಮಾಡಬೇಕೆಂದು ಅಲ್ಲಿಗೆ ಭೇಟಿ ಕೊಟ್ಟಿದ್ದ ಫೋಟೋಗಳನ್ನು ಪತ್ರಿಕೆಗಳಲ್ಲಿ ನೋಡಿದೆ. ಅದೂ ಸಹ ತಪ್ಪಾದಂಥ ಆಯ್ಕೆ. ಕಾರಣ ಇರತಕ್ಕ ಜನರಿಗೆ, ಹೋಗಿ ಬರುವ ವಾಹನಗಳಿಗೆ ಅಲ್ಲಿ ಓಡಾಡಲು ಆಗುತ್ತಿಲ್ಲ. ಅಂಥ ಸ್ಥಳದಲ್ಲಿ ಖಾಸಗಿ ಬಸ್ಸ್ ನಿಲ್ದಾಣ ಮಾಡುತ್ತೇವೆಂದರೆ ತಪ್ಪು ತೀರ್ಮಾನವಾಗುತ್ತದೆ. ಆದ್ದರಿಂದ ರಾಜಾಜಿನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಹೊರಗಡೆ ಎಲ್ಲಾದರು 4-5 ಎಕರೆ ಜಮೀನು ತೆಗೆದುಕೊಂಡು

ಅಲ್ಲಿ ಖಾಸಗಿ ಬಸ್ ನಿಲ್ದಾಣ ಮಾಡಿದರೆ, ಸೂಕ್ತವೆಂದು ತಮ್ಮ ಮೂಲಕ ಸಚಿವರ ಗಮನಕ್ಕೆ ತರುತ್ತೇವೆ. ಇವತ್ತು ಈ ಜಾಗದಲ್ಲಿ ಜನರು ಓಡಾಡಲು ಬಹಳ ಕಷ್ಟಪಡುತ್ತಿದ್ದಾರೆ. ಮಹಾರಾಣಿ ಕಾಲೇಜಿನಿಂದ ರಾಜಾಜಿನಗರಕ್ಕೆ ಹೋಗುವಂಥ ಫ್ಲೈಓವರ್ ವ್ಯವಸ್ಥೆ ಮಾಡಬೇಕೆಂದು ಉದ್ದೇಶವಿದೆ. ಆದ್ದರಿಂದ ಮಿನರ್ವ ಮಿಲ್ ಮತ್ತು ಬಿನ್ನಿ ಮಿಲ್ ಸ್ಥಳವನ್ನು ಕೈಬಿಡಬೇಕು. ಹೊಸ ಸ್ಥಳವನ್ನು ಆಯ್ಕೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಅನಂತ್‌ನಾಗ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥಮಾಡಿಕೊಂಡಿದ್ದೇನೆ. ಈ ದೃಷ್ಟಿಯಿಂದ ಮತ್ತೊಮ್ಮೆ ಸಮಗ್ರವಾಗಿ ಇದರ ಬಗ್ಗೆ ಪುನರ್ಪರಿಶೀಲನೆ ಮಾಡಬೇಕಾಗುತ್ತದೆ. ದಾಖಲೆ ಇಲ್ಲದೆ ಹೈಕೋರ್ಟ್‌ನಲ್ಲಿ ಹೇಗೆ ತಡೆಯಾಜ್ಞೆ ಕೊಟ್ಟರು ಎಂಬ ಬಗ್ಗೆ ವಿಚಾರವನ್ನು ತಿಳಿದುಕೊಂಡು ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಗಮನದಲಿಟ್ಟುಕೊಂಡು ಪುನಃ ಇದರ ಬಗ್ಗೆ ಪುನರ್ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ದಾಖಲೆಗಳು ಇಲ್ಲದೆ ಕೋರ್ಟ್ ಯಾವ ರೀತಿ ತಡೆಯಾಜ್ಞೆ ಕೊಟ್ಟಿದೆಯೆಂದು ಕೇಳುತ್ತಿದ್ದಾರೆ. ನಾನು ತಾಳ್ಮೆಯಿಂದ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಬೆಂಗಳೂರು ಮಹಾ ನಗರಪಾಲಿಕೆಯೋ, ಅಥವಾ ರಾಜ್ಯದ ಯಾವುದಾದರೊಂದು ಭಾಗದಲ್ಲಿ ಅಧಿಕಾರಿಗಳು ಖಾತೆಯನ್ನು ಮಾಡಿಕೊಡುತ್ತಾರೆ. ಬೇಕಾದರೆ ವಿಧಾನಸೌಧಕ್ಕೆ ಸಹ ಖಾತೆಯನ್ನು ಮಾಡಿಕೊಡುತ್ತಾರೆ. ಅಂಥ ಪ್ರಸಂಗಗಳಾಗುತ್ತಿರುವುದನ್ನು ನಾವ್ಯಾರು ಮರೆಯಬಾರದು. ನಾವು ಮುಂದೆ ವಿಧಾನಸೌಧದೊಳಗೆ ಬರುವಾಗ ಅದು ಬೇರೆಯವರ ಸ್ವತ್ತು ಎಂದು ತಿಳಿದುಕೊಳ್ಳತಕ್ಕ ಪದ್ದತಿ ಬಂದೀತು. ಅದೇ ರೀತಿ ಬೆಂಗಳೂರಿನಲ್ಲಿ ಹಲವಾರು ಜನರ ಸ್ವತ್ತನ್ನು ಬೇರೆಯವರಿಗೆ ಖಾತೆ ಮಾಡಿಕೊಟ್ಟಿರುವ ಪ್ರಸಂಗಗಳು ಬೆಂಗಳೂರು ಮಹಾನಗರ ಪಾಲಿಕೆಯಲ್ಲಾಗುತ್ತಿದೆ ಎಂದು ತಾಳ್ಮೆಯಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಅನಂತ್‌ನಾಗ್:- ಮಾನ್ಯ ಸದಸ್ಯರ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿ ಆ ರೀತಿ ನಡೆಯದಂತೆ ಜವಾಬ್ದಾರಿವಹಿಸುವುದಾಗಿ ಭರವಸೆ ನೀಡುತ್ತೇನೆ.

ತಡೆಯಿಡಿಯಲಾದ ಪ್ರಶ್ನೆಗಳು

ವಿಷಯ:- ಭದ್ರಾ ಮೇಲ್ದಂಡೆ ಯೋಜನೆಯ ಸರ್ವೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 748

ಶ್ರೀ ಹೆಚ್.ಶಿವಪ್ಪ (ಹರಿಹರ):- ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ